ಹೊರಡಿಸಿರುವುದರಿಂದ ಯಾರಾದರೂ ಅಧಿಕಾರಿಗಳು ತಪ್ಪು ವರ್ತನೆಯಿಂದ ಕಾನೂನು ವಿರುದ್ಧವಾಗಿ ವರ್ತಿಸಿದರೆ ಆ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ ಬರೆದರೆ ಕಾನೂನು ಪ್ರಕಾರ ಉಗ್ರ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಗೋಪಿನಾಥ್ ಸಾಂದ್ರ.—ಮಾನ್ಯ ಅಧ್ಯಕ್ಷರೇ, ಪ್ರಶ್ನೆ ನಂ 531 ಬಹಳ ಮಹತ್ವದ್ದು ಆಗಿರುವುದರಿಂದ ಈ ಪ್ರಶ್ನೆಯನ್ನು ತಾವೇ ಹಾಕಬೇಕೆಂದು ನನ್ನ ವಿನಂತಿ.

SRI K. H. PATIL.—The Hon. Speaker may put the Question No. 531 but not the Member.

MADAM SPEAKER.—Yes, the question No. 531 is put.

Appointment on clerical posts in Karnataka Central Co-operative Bank, Dharwar.

531. SRI K. B. KOLIWAD (Ranibennur).—Will the Minister for Co-operation and Parliamentary Affairs be pleased to state.—

(*a*) whether Government is aware of the appointment made to the clerical posts at the Karnataka Central Co-operative Bank, Dharwar in contravention of relevant rules during the last 2 1/2 years.

(*b*) whether Government is also aware of the termination of services of clerical staff of the Bank in contravention of relevant rules during the same period.

(*c*) if so, the steps taken by Government to prevent such illegal appointments and terminations by the Bank authorities ?

SRI K. H. RANGANATH (Minister for Co-operation and Parliamentary Affairs).—

(*a*) Yes.

(*b*) No.

(*c*) The matter relating to appointments is under examination. Some have approached court. The Bank has flouted rules and the Government instructions—suitable action will be taken after getting the matter examined.

ಶ್ರೀ ಗೋಪಿನಾಥ್ ಸಾಂದ್ರ,—ಈ ಪ್ರಶ್ನೆಯಲ್ಲಿ (ಅ) ಗೆ ಉತ್ತರವಾಗಿ ಬ್ಯಾಂಕಿನವರು ನಿಯಮ ಹಾಗೂ ಸರ್ಕಾರದವರು ನೀಡಿದ ತಿಳುವಳಿಕೆಗಳನ್ನು ತಿರಸ್ಕರಿಸಿದ್ದಾರೆ ಅಂತ ಹೇಳಿದ್ದೀರಿ. ಅದುದರಿಂದ ಅವರ ಮೇಲೆ ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವೆ ?

† ಶ್ರೀ ಕೆ. ಹೆಚ್. ರಂಗನಾಥ್.—ನಾನು ಅವರಿಗೆ ಈಗಾಗಲೇ ಹೇಳಿದ್ದೇನೆ. ಬ್ಯಾಂಕಿನವರು ಸುಮಾರು 108 ಜನರನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು. ಅದರಲ್ಲಿ 68 ಜನರನ್ನು ರಿಜಿಸ್ಟ್ರಾರ್‌ರವರ ಅಪ್ಪಣೆ ಪಡೆದು ತೆಗೆದುಕೊಂಡಿದ್ದರು. ಇನ್ನು 40 ಜನರನ್ನು ರಿಜಿಸ್ಟ್ರಾರವರ ಅಪ್ಪಣೆ ಪಡೆಯದೇ ತೆಗೆದುಕೊಂಡಿದ್ದರು. ಅದರ ಬಗ್ಗೆ ವಿಚಾರಣೆ ಮಾಡುವುದಕ್ಕೆ ಕಳುಹಿಸಿದ್ದೇವೆ. ರಿಪೋರ್ಟ್ ಬಂದ ತಕ್ಷಣ ಅದರ ಬಗ್ಗೆ ವಿಚಾರಣೆ ಮಾಡುತ್ತೇವೆ. ಅವರು ಕಾಯಿದೆ ವಿರುದ್ಧವಾಗಿ

ಕೆಲಸ ಮಾಡಿರುವುದರಿಂದ ಅವರ ಮೇಲೆ ಏನು ಕಾರ್ಯಕ್ರಮ ಕೈಗೊಳ್ಳಬೇಕು ಅನ್ನುವುದನ್ನು ವಿಚಾರ ಮಾಡುತ್ತಿದ್ದೇವೆ. ಇನ್ನು ತೆಗೆದಿರತಕ್ಕ 30 ಜನ ನೌಕರರಲ್ಲಿ ಕೆಲವರನ್ನು ತೆಗೆದು ಕೊಂಡಿದ್ದಾರೆ. ಇನ್ನು ಕೆಲವರನ್ನು ಬಿಟ್ಟುಬಿಟ್ಟಿದ್ದಾರೆ. ಇದಕ್ಕೆ ಕಾರಣ ಏನು ಕೇಳಿದ್ದದಕ್ಕೆ, ನಿಗದಿಯಾದ ಕಾಲಕ್ಕೆ ಅವರ ಸೇವೆ ಮುಗಿದುದರಿಂದ ಆ ಕಾಲ ಮುಗಿದ ಮೇಲೆ ಅವರನ್ನು ವಾಪಸ್ಸು ಕಳುಹಿಸಬೇಕಾಯಿತು ಎಂದು ಹೇಳಿದ್ದಾರೆ. ಬೇಕಾಗಿದ್ದರೆ ಇನ್ನು 41 ಜನರನ್ನು ಅವರೇ ಕಂಟಿನ್ಯೂ ಮಾಡಬಹುದಾಗಿತ್ತು. ಅವರನ್ನೂ ಸಹ ತೆಗೆದಿದ್ದಾರೆ. ಕಳೆದ ಪರ್ಷ ಇಂಡಸ್ಟ್ರಿಯಲ್ ಟ್ರಿಬ್ಯೂನಲ್‌ಗೆ 16 ಜನ ಹೋಗಿದ್ದರು. ಇದು ಅವರ ವ್ಯಾಪ್ತಿಗೆ ಒಳಪಡುವುದಿಲ್ಲ ಎಂದು ಬ್ಯಾಂಕಿನವರು ರಿಟ್ ಹಾಕಿ ಸ್ಟೇ ತೆಗೆದುಕೊಂಡಿದ್ದಾರೆ. ಇದು ಕಾಂಪ್ಲಿಕೇಟೆಡ್ ಆಗಿರುವುದರಿಂದ ಇದರ ಬಗ್ಗೆ ಸರಕಾರದ ಗಮನ ಹರಿದಿದೆ. ಇದು ಕಾನೂನು ವಾಹಿರವಾಗಿರುವುದರಿಂದ ಇದರ ಬಗ್ಗೆ ಎನ್‌ಕ್ವೈರಿ ಮಾಡುವುದಕ್ಕೆ ರಿಜಿಸ್ಟ್ರಾರರವರನ್ನು ಕಳುಹಿಸಿದ್ದೇವೆ. ಆ ರಿಪೋರ್ಟ್ ಬಂದ ಕೂಡಲೇ ಕಾರ್ಯಕ್ರಮ ಕೈಗೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ.—ನಮ್ಮ ಕರ್ನಾಟಕ ಸೆಂಟ್ರಲ್ ಕೋ ಆಪರೇಟೀವ್ ಬ್ಯಾಂಕ್ ಏನು ಇದೆ ಇಲ್ಲಿ ಆಪಾಯಿಂಟ್ ಮಾಡುವಾಗ ಹರಿಜನ ಮತ್ತು ಗಿರಿಜನರಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ. ಅಪಾಯಿಂಟ್ ಮಾಡುವಾಗ ಅವರನ್ನು ಮರತಿದ್ದಾರೆ. ದಯಮಾಡಿ ಅಧ್ಯಕ್ಷರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಇದಕ್ಕೆ ಕಾರಣರು ಯಾರು ? ಅದನ್ನು ಕಂಡು ಹಿಡಿದು ತಪ್ಪು ಕಾಲ ದಲ್ಲಾದರೂ ಇನ್ನು ಮುಂದೆ ಇದಕ್ಕೆ ರೆಕ್ರೂಟ್ ಮಾಡುವಾಗ ಹರಿಜನ ಮತ್ತು ಗಿರಿಜನರನ್ನೂ ಕೂಡ ತೆಗೆದುಕೊಳ್ಳುವ ಹಾಗೆ ಕನ್ಸಿಡರ್ ಮಾಡುತ್ತೀರಾ ? ಹರಿಜನ ಮತ್ತು ಗಿರಿಜನರಿಗೆ ನೇಮಕಾತಿಯಲ್ಲಿ ರಕ್ಷಣೆ ಕೊಡುತ್ತೇನೆಂದು ಈ ನಿಂದರ್ಭದಲ್ಲಿ ತಾವು ಅಭಯ ಕೊಡುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್.—ತಿ ದ್ಯಷ್ಟಿಯಿಂದಲೇ ಹೋದವರ್ಷ ಸೆಪ್ಟೆಂಬರ್ 1976 ರಿಂದ ತಾಲ್ಲೂಕು ಮಟ್ಟದಲ್ಲಿರುವ ಸಹಕಾರ ಸಂಘಗಳು ಅಭ್ಯರ್ಥಿಗಳನ್ನು ನೇಮಕ ಮಾಡಬಾರದೆಂದು ತಿಳಿಸಿದ್ದೇವೆ. ಈಗ ನಾವು ಇದಕ್ಕೆ ರಿಕ್ರೂಟ್‌ಮೆಂಟ್ ಕಮಿಟಿ ಎಂದು ಮಾಡಿದ್ದೇವೆ. ಬಹಳ ದಿವಸಗಳಿಂದಲೂ ಬ್ಯಾಕ್‌ವರ್ಡ್ ಕ್ಲಾಸ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಏನು ರಿಸರ್ವೇಷನ್ ಇಡಬೇಕಾಗಿತ್ತೋ ಅದನ್ನು ಇಟ್ಟಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆ. ಈಗ ಮಾನ್ಯ ಸದಸ್ಯರ ಅಭಿಪ್ರಾಯ ಏನಿದೆಯೋ ಅದನ್ನು ತೀವ್ರವಾಗಿ ವಿಚಾರ ಮಾಡುತ್ತೇನೆ.

ಶ್ರೀ ಎಂ.ಹೆಚ್, ಜಯಪ್ರಕಾಶ್‌ನಾರಾಯಣ್.—ಮಾನ್ಯ ಮಂತ್ರಿಗಳು ಇರ್ರೆಗ್ಯುಲಾರಿಟೀಸ್ ಆಫ್ ಆಪಾಯಿಂಟ್‌ಮೆಂಟ್ ಏನಿದೆ ಅದನ್ನು ಸರಿಪಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿಲ್ಲ. "Whether the Government is aware of the appointment made to the clerical posts at the Karnataka Central Co-operative Bank, Dharwar in contravention of relevant rules during the last 2 1/2 years ಅಂತ ಕೇಳಿರುವ ಪ್ರಶ್ನೆಗೆ "ಎಸ್" ಅಂತ ಉತ್ತರ ಕೊಟ್ಟಿದ್ದೀರಿ. ಅಂದರೆ ಇದು ಅನ್ ಕಾನ್‌ಸ್ಟಿಟ್ಯೂಷನಲ್ ಆಗಿ ಆಗಿದೆ. ಇರ್ರೆಗ್ಯುಲರ್ ಆಗಿ ಆಗಿದೆ ಎಂದು ಸರ್ಕಾರದವರೇ ಪೂರ್ಣವಾಗಿ ಒಪ್ಪಿಕೊಂಡಹಾಗಾಯಿತು. ಈಗ ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿದ್ದೀರಿ. ಈ ರೀತಿ ಇರ್ರೆಗ್ಯುಲಾರಿಟಿ ಇರುವುದು ಬರೀ ಧಾರವಾಡದಲ್ಲೇ ಅಲ್ಲ, ದೇಶದಲ್ಲೆಲ್ಲಿರುವ ಎಲ್ಲ ಸಹಕಾರ ಸಂಘಗಳಲ್ಲೂ ಆಗಿದೆ ಇದನ್ನು ತಾವು ಕ್ಲಾಸಿಫಿಕೇಷನ್ ಮಾಡಿಸಿ ಯಾವ ಯಾವ ಕ್ಯಾಟಗರಿಗೆ ಎಷ್ಟೆಷ್ಟು ಕೊಡಬೇಕೆಂದಿದೆ ಎಂಬುದನ್ನು ನೋಡಿ, ಹಿಂದಿನಿಂದ ಕೊಟ್ಟಿರುವುದರಲ್ಲಿ ಎಷ್ಟು ಕಡಿಮೆ ಕೊಟ್ಟಿದ್ದಾರೆಂಬುದನ್ನು ಪರಿಶೀಲಿಸಿ ಅದನ್ನು ಮುತ್ತು ಇನ್ನೂ ಮುಂದೆ ನೇಮಕ ಮಾಡುವುದರಲ್ಲಿ ಕೊಡಬೇಕಾದ ಪರ್ಸೆಂಟೇಜ್ ಏನಿದೆ, ಅದನ್ನೂ ಕೊಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕೆ ಪೆಚ್. ರಂಗನಾಥ್.—ಈಗ ರೆಕ್ರೂಟ್‌ಮೆಂಟ್ ಕಮಿಟಿಯನ್ನು ನೇಮಕ ಮಾಡಿದ್ದೇವೆ. ಆದರೆ ಹಿಂದೆ ಏನು ಕಡಿಮೆ ಕೊಟ್ಟಿದೆ ಅದನ್ನು ಈಗ ಕೊಡಿ ಎಂದು ಏನು ಕೇಳುತ್ತಿದ್ದೀರಿ ಅದನ್ನು ಈಗ ಕೊಡುವುದಕ್ಕಾಗುವುದಿಲ್ಲ ಇನ್ನು ಮುಂದೆ ಈ ರೀತಿ ಅನ್ಯಾಯವಾಗದಂತೆ ಸರ್ಕಾರ ಕ್ರಮ ತಗೊಂಡುಕೊಳ್ಳುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

Regularisation of Services of Work Charged Establishment in P.W.D.

312. SRI B. M. HORAKERI (Guledgud).—Will the Minister for Public Works be pleased to state.—

(*a*) whether the work charged establishment *viz.*, Junioar Engineers, Work Inspectors employed by the PWD in the State are serving in different sections of the Department,

(*b*) if so, the number of such employees in different categories.

(*c*) whether these employees are entitled to regular increments, new pay scales and other such facilities as per KCSRs.

(*d*) whether services of such employees have been regularised taking into consideration the length of their service, experience and efficiencies,

(*e*) if not, the reasons for the same ?

SRI M. MALLIKARJUNA SWAMY (Minister for Public Works).—

(*a*) Yes.

(*b*) 1. Junior Engineers ... 2
2 Work Inspectors ... 2 471

(*c*) The service conditions of these employees are not governed by the provisions of KCSRs, but by the provisions of KPWD Code. They are entitled to regular increments. The new pay scales and other facilities like leave facilities, dearness allowance, project allowance, medical facilities and maternity leave. etc., are also extended to them.

(*d*) No.

(*e*) There are no provisions in the C and R Rules to regularise these employees.

ಶ್ರೀ ಬಿ. ಎಂ. ಹೊರಕೇರಿ.—ಸ್ವಾಮಿ, ಇಬ್ಬರು ಜೂನಿಯರ್ ಇಂಜಿನಿಯರ್ಸ್ ಮತ್ತು 2,471 ಜನ ಕಾಮಗಾರಿ ನಿರೀಕ್ಷಣಾಧಿಕಾರಿಗಳು ಏನಿದ್ದಾರೆ ಇವರು ಎಷ್ಟು ದಿವಸಗಳಿಂದ ಕೆಲಸ ಮಾಡುತ್ತಿದ್ದಾರೆ ? ಮತ್ತು ಇವರಲ್ಲಿ ಮುಸ್ಲಿಂ ಬಾಂಧವರು ಎಷ್ಟು ಜನರಿದ್ದಾರೆ ? ಅವರ ಬಗ್ಗೆ ಏನು ಕ್ರಮ ತಗೆದುಕೊಳ್ಳುತ್ತೀರಿ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಉತ್ತರ ಒದಗಿಸುತ್ತೇನೆ.